Janab J. MOHAMED IMAM.—Is it not a fact that this Committee was appointed in pursuance of a resolution of the Representative Assembly in this regard?

The Hon'ble Sri K. CHENGALARAYA REDDY.—Quite so.

Janab J. MOHAMED IMAM.—So, is it not proper that the Legislature which empowered the Government to appoint this committee should be taken into confidence and the report should be supplied to the Members of the Legislature?

Mr. SPEAKER.—The Hon'ble Leader of the House already said that he would consider that point.

Janab J. MOHAMED IMAM.—What action have the Government taken or they proposed to take to prevent the repetition of such a thing?

The Hon'ble Sri K. CHENGALARAYA REDDY.—The very fact that we instituted an enquiry into this affair has been a powerful factor in preventing such a thing occurring hereafterwards.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು (ಹಾನನ ಜಿಲ್ಲೆ).—ಈ ಸಂದರ್ಭದಲ್ಲಿ ಆ ಸಮಿತಿಯಲ್ಲಿ ಕೆಲಸಮಾಡಿದ ಅಧಿಕಾರಿಗಳಿಗೇನಾದರೂ ಇನಾಂಗಳನ್ನು ಕೊಟ್ಟಿದ್ದೀರಾ?

*ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇನಾಂಗಳನ್ನು ಯಾರಿಗೂ ಕೊಟ್ಟಿಲ್ಲ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಸಂಭಾವನೆಗಳನ್ನೇನಾದರೂ ಕೊಟ್ಟಿದ್ದೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸರ್ಕಾರದ ರೂಲ್ಸುಗಳಿಗನುಸಾರವಾಗಿ ಯಾವ ಯಾವ ಇರಾಖೆಯಿಂದ ಅಧಿಕಾರಿಗಳು ಈ ಸಮಿತಿಯಲ್ಲಿ ಬಂದು ಕೆಲಮಾಡಿದ್ದಾರೋ ಅಂಥವರಿಗೆ ಅವರು ಮಾಡಿರತಕ್ಕ ಕೆಲಸಗಳನ್ನು ಪರಿಶೀಲಿಸಿ ಯಾವ್ಯಾರಿಗೆ ಕಾನೂನು ಪ್ರಕಾರ ಏನೇನು ಕೊಡಬಹುದಾಗಿತ್ತೋ ಅದನ್ನು ಮಾತ್ರ ಕೊಡಲಾಗಿದೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಈ ಸಮಿತಿಯಲ್ಲಿ ಸೇವೆ ನಲ್ಲಿಸಿದ ಖಾಸಗೀ ಸದಸ್ಯರುಗಳಿಗೇನಾದರೂ ಸಂಭಾವನೆಗಳನ್ನು ಸಲ್ಲಿಸಿದ್ದೀರಾ?

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇಲ್ಲ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಆ ಸಮಿತಿಯವರ ವರದಿಯನ್ನು ಸಭೆಯಮುಂದೆ ಇಡಲಾಗುತ್ತದೆಯೇ?

ಅಧ್ಯಕ್ಷರು.—ಹಾಗೆ ಇಡಲಾಗುವುದಿಲ್ಲವೆಂಬುದಾಗಿ ಆಗಲೇ ಉತ್ತರ ಕೊಟ್ಟಿದ್ದಾರೆ. ಈಗ ಎರಡನೆಯ ಭಾಗದಲ್ಲಿ ಅಚ್ಚಾಗಿರತಕ್ಕ ಪ್ರಶ್ನೋತ್ತರಗಳ ಪೈಕಿ 32ನೆಯ ಪ್ರಶ್ನೆಯನ್ನು ಕೈಗೆದುಕೊಳ್ಳಲಾಗುತ್ತದೆ.

Present arrangement for maintenance of minor tanks.

*Q. –32. **Sri S. KARIAPPA** (Bangalore District—General).—

Will the Government be pleased to state :—

the present arrangement for maintenance of minor tanks?

A.—**The Hon'ble Sri T. MARIAPPA** (Home Minister).—

Maintenance of Tanks.

(i) In regard to the maintenance of tanks, there is no difference between major and minor tanks. Where there is a Tank Panchayet, the duty of maintenance devolves on that Panchayet.

(ii) Repairs to masonry, *e.g.*, waste weir, sluices, etc., are carried out by the Public Works Department.

(iii) Earthwork, turfing, removal of rank vegetation from bunds and supply channels should be attended to by land-holders and others deriving any *benefit* from the tank.

(iv) The duty of enforcing the obligations of the raiyats rests upon the Patel under the supervision of the higher Revenue Officers. In cases of default, the work may be carried out by the Amildar and the amount recovered as a revenue demand.

(v) Petty work, the cost of which does not exceed Rs. 100 and also one year's average revenue of the atchkat may be carried out on rough estimates under the orders of the Amildar. The Amildar's imprest should be used in the first instance for this and recouped by prompt recovery from raiyats. Detailed estimates should be prepared in all other cases and sanctioned by the Deputy Commissioner if the cost does not exceed Rs. 1,000. Works involving heavy outlay or technical difficulties may, at the discretion of the Deputy Commissioner, be entrusted to Public Works Department for execution.

(vi) If maintenance work is neglected and the cost of executing it exceeds one year's revenue from the tank, the excess is generally borne by Government; but this rule has been recently modified. It is within the

(THE HON'BLE SRI T. MARIAPPA.)

discretion of Deputy Commissioner at present to fix what proportion of cost incurred as the result of the raiyats' cumulative neglect should be recovered from them. For the cost of repairing feeder channels Government have agreed to bear one-half of the cost.

Unrestored Tanks.

In respect of tanks not brought up to standard, the Revenue authorities should endeavour to have the annual maintenance work done by raiyats by using their influence and persuading them to do their share of work in their own interest.

ಶ್ರೀ ಎಸ್. ಕರಿಯಪ್ಪನವರು.—ನಾನು ಕೇಳಿರತಕ್ಕ ಪ್ರಶ್ನೆಗೆ ಉತ್ತರವಾಗಿ (j)ರಲ್ಲಿ— ಕೆರೆಗಳ ರಕ್ಷಣೆಯ ಭಾರದಲ್ಲಿ ಮೇಜರ್ ಕೆರೆಗಳಿಗೂ ಮತ್ತು ಮೈನರ್ ಕೆರೆಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಕೆರೆಗೆ ಸಂಬಂಧ ಪಟ್ಟ ಪಂಚಾಯಿತಿ ಇರುವ ಸ್ಥಳದಲ್ಲಿ ಕೆರೆಯ ರಕ್ಷಣೆಯ ಕರ್ತವ್ಯವು ಆ ಪಂಚಾಯಿತಿಗೇ ಸೇರಿದ್ದಾಗಿರುತ್ತದೆಂದು ತಿಳಿಸಿದ್ದೀರಿ. ಆ ತರಹ ಪಂಚಾಯಿತಿಗಳು ಎಲ್ಲೆಲ್ಲಿವೆಯೆಂಬುದನ್ನು ಹೇಳಬಲ್ಲಿರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಸ್. ಕರಿಯಪ್ಪನವರು.—ಅಂಥಾ ಸಂದರ್ಭ ಒಂದಾದರೂ ಇದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದರೆ ಇಲ್ಲಿಯತನಕ ಹಾಗೆ ಯಾವ ಪಂಚಾಯಿತಿಗಳೂ ಕೆರೆ ಕೆಲಸವನ್ನು ಮಾಡುತ್ತಿಲ್ಲ. ಇಂಥಾದ್ದು ಒಂದೆರಡಿರಬಹುದು.

ಶ್ರೀ ಎಸ್. ಕರಿಯಪ್ಪನವರು.—ಉತ್ತರವನ್ನೊದಗಿಸಿರುವುದರ ೩ನೆಯ ಭಾಗದಲ್ಲಿ ಮಣ್ಣಿನ ಕೆಲಸ, ಹುಲ್ಲು ಬೆಳೆಯಿಸುವುದ , ಕೆರೆಯ ಏರಿಯಮೇರೆ ಸಿಕ್ಕಾಪಟ್ಟೆ ಬೆಳೆದಿರುವ ಗಿಡಗಳನ್ನು ಕಿತ್ತುಹಾಕುವುದು, ಮತ್ತು ನೀರು ಸರಬರಾಯಿಮಾಡುವ ನಾರೆಗಳ ದುರಸ್ತಿ ಕೆಲಸಗಳು—ಇವೇ ಮೊದಲಾದುವುಗಳನ್ನು ಅಚ್ಚುಕಟ್ಟುದಾರರೂ, ಮತ್ತೂ ಕೆರೆಯಿಂದ ಯಾವುದಾದರೂ ರೀತಿಯಲ್ಲಿ ಪ್ರಯೋಜನವನ್ನು ಪಡೆಯತಕ್ಕ ಇತರರೂ ನೋಡಿಕೊಳ್ಳಬೇಕಾಗಿದೆಯೆಂದು ತಿಳಿಸಿದ್ದೀರಿ. ಇದರ ಜೊತೆಗೆ ಕೆರೆಯಿಂದ ಯಾವುದಾದರೂ ರೀತಿಯಲ್ಲಿ ಪ್ರಯೋಜನವನ್ನು ಪಡೆಯತಕ್ಕ ಇತರರೂ, ಎಂದರೆ ಇತರೇ ಯಾವ ಯಾವ ರೀತಿಯಲ್ಲಿ ಯಾರ್ಯಾರು ಪ್ರಯೋಜನ ಪಡೆಯುತ್ತಿದ್ದಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಯಾಯ ಕೆರೆಗಳಲ್ಲಿರುವ ಮಾನುಗಳನ್ನು ಹಿಡಿದುಕೊಂಡು, ಆ ಬಗ್ಗೆ ಆ ಕೆರೆಗಳ ಸಾರಾಬಾದು ಕಾಂಗಾರಿಮಾಡಬೇಕೆಂದು ಗೊತ್ತುಮಾಡಿದೆ.

ಶ್ರೀ ಎಸ್. ಕರಿಯಪ್ಪನವರು.—ಹೀಗೆ ಕೆರೆಗಳಲ್ಲಿರುವ ಮಾನುಗಳನ್ನು ಹಿಡಿಯತಕ್ಕ ಅಧಿಕಾರವನ್ನೂ ಸಹ ಸರ್ಕಾರದವರೇ ಈಗ ಇಟ್ಟುಕೊಂಡಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾನುಗಳನ್ನು ಸಾಕಲಿಕ್ಕೇ ಕೆಲವು ಕೆರೆಗಳನ್ನು ಅವಾನತ್ತುಮಾಡಿಕೊಳ್ಳಲಾಗಿದೆ. ಮತ್ತೆ ಕೆಲವನ್ನು ಹರಾಜು ಹಾಕಿ ಅದರಿಂದ ಬಂದ ದುಡ್ಡಿನಿಂದ ಆ ಕೆರೆ ಕೆಲಸಗಳನ್ನು ನಡೆಸಲಾಗುತ್ತಿದೆ. ಕೆಲವನ್ನು ಹಾಗೂ ಕೊಡಲಾಗಿದೆ.

ಶ್ರೀ ಎಸ್. ಕರಿಯಪ್ಪನವರು.—ಹಾಗೆ ಕೆರೆ ರಿಪೇರಿ ವಗೈರೆ ನಡೆಸುತ್ತೇವೆಂದು ಹೇಳಿ ಮಾನುಗಳನ್ನು ಹಿಡಿದುಕೊಂಡು ಹೋಗತಕ್ಕವರು ಆ ರೀತಿ ಯಾವ ಸಾರಾಬಾದು ಕಾಂಗಾರಿಗಳನ್ನೂ ನಡೆಸದೆ ತೊಂದರೆಯಾಗಿರುತ್ತದೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಮಾನು ಹಿಡಿಯತಕ್ಕವರು ಮುಚ್ಚಳಿಕೆ ಬರೆದುಕೊಟ್ಟಿರುವ ಪ್ರಕಾರ ತಾವು ಸಾರಾಬಾದು ಕಾಂಗಾರಿಗಳನ್ನು ನಡೆಸದೆ ಹೋದರೆ ಸರ್ಕಾರದವರು ಮುಂದೆ ಅವರ ಮೇರೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಎಸ್. ಕರಿಯಪ್ಪನವರು.—ಹಾಗೆ ಇಲ್ಲಿಯತನಕ ಅಂಥವರ ಮೇರೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಳಗಿನ ಅಧಿಕಾರಿಗಳಿಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅದರಂತೆ ನಡೆಯಲು ತಿಳಿಸಿರುತ್ತೆ.

ಶ್ರೀ ಎಸ್. ಕರಿಯಪ್ಪನವರು.—ಒಂದು ನಿಯತ ಪ್ರಮಾಣದ ಮಟ್ಟಕ್ಕೆ ತರಲ್ಪಟ್ಟಿಲ್ಲದ ಕೆರೆಗಳ ವಿಷಯದಲ್ಲಿ ರೆವೆನ್ಯೂ ಅಧಿಕಾರಿಗಳು ರೈತರುಗಳಲ್ಲಿ ತಮ್ಮ ಮಾತಿನ ಭಾರಿಯ ಪ್ರಭಾವವನ್ನು ಉಪಯೋಗಿಸಿ ಅವರು ತಮ್ಮ ಹಿತದೃಷ್ಟಿಯಿಂದಲೇ ಅವರವರ ಭಾಗದ ಕೆಲಸವನ್ನು ಮಾಡುವಂತೆ ಅವರನ್ನು ಪ್ರೇರೇಪಿಸುವುದರ ಮೂಲಕ ವಾರ್ಷಿಕ ರಕ್ಷಣಾ ಕಾಮಗಾರಿಯು ಅವರಿಂದ ನೆರವೇರಿಸಲ್ಪಡುವಂತೆ ಮಾಡಲು ಪ್ರಯತ್ನಿಸಬೇಕೆಂದು ಹೇಳಿದ್ದೀರಿ. ಹಾಗೆ ಅವರು ಇಲ್ಲಿಯತನಕ ಏನು ಪ್ರಯತ್ನಗಳನ್ನು ನಡೆಸಿದ್ದಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗೆ ಪ್ರಯತ್ನಮಾಡುವಂತೆ ತಿಳಿಸಲಾಗಿದೆ. ರೆವೆನ್ಯೂ ಇನ್ಸ್‌ಪೆಕ್ಟರುಗಳು ಆಯಾಯ ಹಳ್ಳಿಗಳಿಗೆ ಹೋಗಿ ಆ ರೀತಿ ಪ್ರಚಾರ ನಡೆಸಿ ಅವರಿಗೆ ಇಷ್ಟಿಷ್ಟು ಗಜ ಕೆಲಸಮಾಡಬೇಕೆಂದು ಅಳತೆಮಾಡಿಕೊಟ್ಟು ಗೊತ್ತು ಮಾಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ) —ಈ ಪಾಶ್ಚಾರದ ವಿಚಾರದಲ್ಲಿ... .....

ಅಧ್ಯಕ್ಷರು.—ಈ ಪ್ರಶ್ನೆ ಪಾಶ್ಚಾರದ ವಿಚಾರಕ್ಕೆ ಸಂಬಂಧಪಟ್ಟಿದ್ದಲ್ಲ. ತಾವು ಕೇಳತಕ್ಕ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಆಗಲಿ ಸ್ವಾಮಿ. ಅದನ್ನೇ ತಿರುಗಿಸಿ ಕೇಳುತ್ತೇನೆ. ಈಗ ತಾವು ಹೇಳಿದ ಪ್ರಕಾರ ಕೆಲವು ಕೆರೆಗಳನ್ನು ಪಾಶ್ಚಾರಕ್ಕೆ ಕೊಟ್ಟು ಮತ್ತೆ ಕೆಲವು ಕೆರೆಗಳನ್ನು ಗ್ರಾಮಸ್ಥರಿಗೇ ಬಿಟ್ಟುಕೊಡಲಾಗಿದೆಯೆಂದು ತಿಳಿಸಿದಿರಿ. ಅದರಿಂದ ವಿಶೇಷ ತೊಂದರೆಗಳಾಗಿ ತಮ್ಮ ಉದ್ದಿಶ್ಯ ನೆರವೇರುತ್ತಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲೆಲ್ಲ ರೈತರು ತಾವಾಗೇ ಮುಂದೆ ಬಂದು ಆ ಸಾರಾಬಾದು ಕಾಂಗಾರಿಗಳನ್ನು ನಡೆಸುತ್ತೇವೆಂದು ಮುಚ್ಚಳಿಕೆ ಬರೆದುಕೊಡುತ್ತಾರೋ ಅಂಥವರಿಗೆ ಮಾತ್ರ ಕೊಡಲಾಗುತ್ತಿದೆ ಎಂದು ತಿಳಿಸಿದ್ದೇನೆಯೇ ವಿನಾ ಗ್ರಾಮಸ್ಥರಿಗೆ ಎಂದು ಹೇಳಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಮುಚ್ಚಳಿಕೆ ಬರೆದುಕೊಟ್ಟು ಅದರ ಪ್ರಕಾರ ನಡೆಯದೆ ಹೋದವರ

ಮೇಲೆ ಇಲ್ಲಿಯತನಕ ಏನೇನು ಕಾರ್ಯಕ್ರಮಗಳನ್ನು ಸರ್ಕಾರದವರು ಕೈಗೊಂಡಿದ್ದಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು. ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಗ್ರಾಮಸ್ಥರು ಈ ಪಾಶ್ಚಾರು ಮಾಡತಕ್ಕವರು ಸಾಲಾಬಾದು ಕಾಂಗಾರಿ ನಡೆಸಲು ಎಂದೂ, ಆ ಪಾಶ್ಚಾರು ಮಾಡತಕ್ಕವರು ಗ್ರಾಮಸ್ಥರೇ ಅದನ್ನು ಮಾಡಲು ಎಂದೂ, ಆ ಸಾಲಾಬಾದು ಕಾಂಗಾರಿಯೇ ಆಗದೆ ಕೆರೆಗಳು ನಾದುರಸ್ತಿಗೆ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ನಿದರ್ಶನಗಳು ಸರ್ಕಾರದವರ ಗಮನಕ್ಕೆ ಬಂದಿವೆ.

ಶ್ರೀ ಎಸ್. ರಂಗರಾಮಯ್ಯನವರು.—ಪ್ರತಿಯೊಂದು ಕೆರೆಯನ್ನೂ ಪಾಶ್ಚಾರು ಮಾಡಿ, ಹಾಗೆ ಅದರಿಂದ ಬರತಕ್ಕ ಹಣದಿಂದ ಈ ಕೆರೆಗಳ ಸಾಲಾಬಾದು ಕಾಂಗಾರಿ ನಡೆಯುವಂತೆ ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಊಹಾ ಪೋಹದ ಪ್ರಶ್ನೆಯಾಗುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಕೆರೆ ಏರಿಗಳ ಮೇಲೆ ಬೆಳೆಯುತ್ತಿರುವ ಹುಲ್ಲನ್ನು ಹರಾಜು ಮಾಡುತ್ತೀರೋ ಅಥವಾ ಅಯಾ ಗ್ರಾಮಸ್ಥರಿಗೇ ಬಿಟ್ಟುಕೊಡುತ್ತೀರೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಕಡೆ ಹರಾಜು ಮಾಡಲಾಗುತ್ತೆ. ಇನ್ನು ಕೆಲವು ಕಡೆ ಅಯಾ ಗ್ರಾಮಸ್ಥರಿಗೇ ಬಿಟ್ಟುಬಿಡಲಾಗಿರುತ್ತೆ.

ಶ್ರೀ ಎಸ್. ರಂಗರಾವ್ಯಯ್ಯನವರು.—ಎಲ್ಲಾ ಕಡೆಯೂ ಹರಾಜು ಹಾಕಿ, ಹಾಗೆ ಬರತಕ್ಕ ದುಡ್ಡಿನಿಂದ ಈ ಸಾಲಾಬಾದು ಕಾಂಗಾರಿಗಳನ್ನು ನಡೆಸುವುದಕ್ಕೆ ಆಗುವುದಿಲ್ಲವೇ ?

The Hon'ble Sri T. MARIAPPA.—This is not a proper supplementary question.

ಶ್ರೀ ಎಸ್. ರಂಗರಾಮಯ್ಯನವರು.—ಈ ಹಿಕ್ಕಲು ನಾರೆಗಳನ್ನು ರಿಪೇರಿ ಮಾಡಿಸುವುದಕ್ಕೆ ಏನೇನು ವ್ಯವಸ್ಥೆ ಮಾಡಿದ್ದೀರಿ ?

The Hon'ble Sri T. MARIAPPA.—This question refers to only maintenance of tanks. ಕಾಲುವೆಗಳ ವಿಚಾರ ಇಲ್ಲಿ ಬರುವುದಿಲ್ಲ. ರೈತರೇ ನೋಡಿಕೊಳ್ಳಬೇಕು.

ಅಧ್ಯಕ್ಷರು.—ಕಾಲುವೆಗಳ ದುರಸ್ತಿಗೂ ಈ ಪ್ರಶ್ನೆಗೂ ಏನು ಸಂಬಂಧ ?

ಶ್ರೀ ಎಸ್. ರಂಗರಾಮಯ್ಯನವರು.—ಇಂಥಾ ನಾರೆ ಸರಿಯಾದ ಪರಿಸ್ಥಿತಿಯಲ್ಲಿದೆ, ಇಂಥಾದ್ದು ನಾದುರಸ್ತಾಗಿದೆ ಎಂದು ತಾಲ್ಲೂಕು ಅಮಲ್ದಾರರು ಏನಾದರೂ ವರದಿಗಳನ್ನು ಮಾಡುತ್ತಿದ್ದಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆಲ್ಲಾ ನಿಬಂಧನೆಗಳಿವೆ. ಅದರ ಪ್ರಕಾರ ಕೆಲಸ ನಡೆಯುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಆದರೆ ಇವುಗಳ ಕೆಲಸವನ್ನು ಇತ್ತ್ರಾಗಿ ರೈತರೂ ಮಾಡುತ್ತಿಲ್ಲ ; ಅತ್ತ ಕಡೆ ಸರ್ಕಾರದವರೂ ಮಾಡುತ್ತಿಲ್ಲ. ಹೀಗಾಗಿ ನಾಲೆಗಳಲ್ಲಾ ನರಿಯಾಗಿ ನೀರೇ ಹತ್ತದೆ, ತೊಂದರೆಯಾಗಿರುತ್ತೆಂದು ತಮಗೇನೂ ದೂರುಗಳು ಬಂದಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿವೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ತೊಂದರೆಯ ನಿವಾರಣೆಗಾಗಿ ತಾವು ಇಲ್ಲಿಯತನಕ ಏನು ಮಾಡಿದ್ದೀರಿ ಅಥವಾ ಆ ರೀತಿ ಏನನ್ನೂ ಇಲ್ಲಿಯತನಕ ಮಾಡದೆ ಇದ್ದರೆ ಮುಂದೇನು ಕಾರ್ಯಕ್ರಮಗಳನ್ನು ಈ ಬಗ್ಗೆ ಕೈಗೊಳ್ಳಬೇಕೆಂದಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಬಗ್ಗೆ ಎಕರೇಜು ಸೆಸ್ಸನ್ನು ವಿಧಾಯಕ ಮಾಡಿ, ಈ ಕೆಲಸವನ್ನು ಪಿ. ಡಬ್ಲ್ಯು. ಡಿ. ಗೆ ವಹಿಸಬೇಕೆಂಬ ವಿಚಾರ ಸರ್ಕಾರದವರ ಆಲೋಚನೆಯಲ್ಲಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಅದನ್ನಾದರೂ ಮಾಡಿ ಜಾಗ್ರತೆ ಅನುಕೂಲ ಪಡಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದು ಸರ್ಕಾರದವರ ತೀವ್ರ ಪರ್ಯಾಲೋಚನೆಯಲ್ಲಿದೆ ಎಂದು ಆಗಲೇ ತಿಳಿಸಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಕೆಲಸವೇನು ಸರ್ಕಾರದವರಿಗೆ ಅನ್ಯಯನತಕ್ಕದ್ದೇ ಅಥವಾ ರೈತರುಗಳಗೇ ಬಿಡತಕ್ಕದ್ದೇ ಎಂಬ ವಿಚಾರದಲ್ಲಿ ತಾವು ಜಾಗ್ರತೆ ಒಂದು ನಿರ್ಧಾರಕ್ಕೆ ಬಂದು ಈ ಸಾಲಾಬಾದು ಕಾಂಗಾರಿಗಳನ್ನು ನಲೀಸಾಗಿ ನಡೆಸಲು ವಿಚಾರಿಸಿ ಮಾಡುತ್ತೀರಾ ?

The Hon'ble Sri T. MARIAPPA.—It is a very important question and it is engaging the earnest attention of the Government. ಆದರೆ ಇದು ಅಷ್ಟು ಸುಲಭವಾದ ಕೆಲಸವೂ ಅಲ್ಲ. ಈ ತಹಲ್‌ವರಿಗೆ ಈ ಕೆಲಸ ಸರಿಯಾಗಿ ನಡೆಯದೆ ಹೋದುದರಿಂದ ಅನೇಕ ತೊಂದರೆಗಳುಂಟಾಗಿ ದೇಶದಲ್ಲಿ ಈ ಆಹಾರಾಭಾವಕ್ಕೆ ಕಾರಣವಾಗಿದೆ. ಈ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬ ಬಗ್ಗೆ ಸರ್ಕಾರದವರು ತೀವ್ರವಾಗಿ ಪರ್ಯಾಲೋಚನೆ ಮಾಡುತ್ತಿದ್ದಾರೆ. ಆದರೆ ಈ ಕೆಲಸ ಸರ್ಕಾರದವರೊಬ್ಬರಿಂದಲೇ ನಡೆಸುವುದಕ್ಕಾಗುವುದಿಲ್ಲ. ಈ ಕೆಲಸಕ್ಕೆ ಗ್ರಾಮಸ್ಥರ ಮತ್ತು ಅಚ್ಚುಕಟ್ಟುದಾರರೆಲ್ಲರ ಬೆಂಬಲ ಬೇಕಾಗಿದೆ. ಆದರೆ ಈ ಸಾಲಾಬಾದು ಕಾಂಗಾರಿಯನ್ನು ಅಯಾಯ ಗ್ರಾಮಸ್ಥರೇ ಮಾಡಿಕೊಂಡರೆ ಬಹಳ ಒಳ್ಳೆಯದು. ಈ ಸಮಸ್ಯೆಯನ್ನು ಸರ್ಕಾರದವರೇ ಕೈಗೊಳ್ಳಬೇಕಾಗಿದ್ದರೆ ಹೆಚ್ಚಾಗಿ ದುಡ್ಡಿನ ಸಮಸ್ಯೆ, ಶಿಬ್ಬಂದಿ ಸಮಸ್ಯೆ ಇತರೇ ಅನೇಕ ಸಮಸ್ಯೆಗಳು ಉದ್ಭವವಾಗುತ್ತವೆ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಮೊದಲು ಟ್ರಯಿನಿಯರ್ ಹೋಗ್ರಾಂ ಎಂದು ಹಾಕಿ ಮೂರು ವರ್ಷದಲ್ಲಿ ಇಷ್ಟು ಕೆರೆ ಇಷ್ಟು ಜಿಲ್ಲೆಯೆಲ್ಲಾ ರಿಪೇರಿಯಾಗಬೇಕೆಂದು ಮಾಡುತ್ತಿರಲಿಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಅದು ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕೆ ಸಂಬಂಧಪಟ್ಟದ್ದು.

ಶ್ರೀ ಟಿ. ಮಾದಯ್ಯಗೌಡರು.—ಸಾಲಾಬಾದು ಕಾಂಗಾರಿಯ ವಿಚಾರದಲ್ಲಿ ಯಾವ್ಯಾವ ಕೆರೆ ಯಾವ್ಯಾವ ಸ್ಥಿತಿಯಲ್ಲಿದೆಯೆಂದು ಹೇಳುವುದಕ್ಕೆ history sheet maintain ಮಾಡುತ್ತಾರೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಟ್ಯಾಂಕ್ ರಿಜಿಸ್ಟರಿತ್ತು. ಅದು out of date ಆಗಿತ್ತು. ಅದನ್ನು up to date ಮಾಡಬೇಕೆಂದು ಫಾರಂ ಸರಿಪಡಿಸುತ್ತಿದೆ.

ಶ್ರೀ ಟಿ. ಮಾದಯ್ಯಗೌಡರು.—ಈಗ ಕೆರೆಗಳ ಸ್ಥಿತಿ ಹೇಗಿದೆ, ಎಷ್ಟು ಕೆರೆಗಳಿಗೆ ತೂಬುಗಳು, ಏರಿಗಳು ಎಗ್ಗೈರೆ ಸರಿಯಾಗಿಲ್ಲದೆ ನಾದುರಸ್ತಾಗಿವೆಯೆಂದು ಹೇಳುವುದಕ್ಕೆ ಸರ್ವೆ ಮಾಡಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇಕಾದ ಸಾಮಾನುಗಳನ್ನು ಜಮಾಯಿಸಿ ತೂಬು ರಿಪೇರಿ, ಏರಿ ರಿಪೇರಿ ಮುಂತಾದ ಕೆಲಸಗಳನ್ನು 1949–50 ರಿಂದ ಮಾಡಿದೆ. ಸುಮಾರು ಮೂರು ಸಾವಿರ ಚಿಲ್ಲರೆ ಕೆರೆಗಳಲ್ಲಿ ಆ ರೀತಿಯ ಕೆಲಸ ನಡೆದಿದೆ.

ಶ್ರೀ ಟಿ. ಮಾದಯ್ಯಗೌಡರು.—ಟ್ಯಾಂಕ್ ಪಂಚಾಯಿತಿ ಕೆಲಸಮಾಡುತ್ತಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಸರಿಯಾಗಿ ಕೆಲಸ ಮಾಡುವಂತೆ ಮಾಡುವುದಕ್ಕೆ ಬಹಳ ಕಾಲದ ಹಿಂದೆ ಸ್ಥಾಪನೆ ಮಾಡಿದ್ದ ಟ್ಯಾಂಕ್ ಪಂಚಾಯಿತಿಯನ್ನು ಹೊಸದಾಗಿ ಮಾಡಲು ಏನಾದರೂ ಪ್ರಯತ್ನ ಮಾಡಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಮೊದಲೇ ಹೇಳಿದೆ. ಅದು ಕ್ಲಿಷ್ಟ ಸಮಸ್ಯೆ, ಆದಷ್ಟು ಜಾಗ್ರತೆ ಈ ವಿಚಾರದಲ್ಲಿ ತಕ್ಕ ಏರ್ಪಾಡು ಮಾಡ ಬೇಕೆಂಬ ಉದ್ದೇಶವಿದೆ. ಈ ವಿಷಯವನ್ನು ಭೂಸುಧಾರಣಾ ಸಮಿತಿಯವರೂ ಸಹ ಪರಿಶೀಲಿಸಿ ಕೆಲವು ಸಲಹೆ ಮಾಡಿದ್ದಾರೆ.

ಶ್ರೀ ಟಿ. ಮಾದಯ್ಯಗೌಡರು. ಸಾಧಾರಣವಾಗಿ ರೆವೆನ್ಯೂ ಅಧಿಕಾರಿಗಳು ಜಮಾಬಂದಿ ಕಾಲದಲ್ಲಿ ಆಯಾ ಗ್ರಾಮದ ಕೆರೆಗಳ ಸ್ಥಿತಿಗತಿಯನ್ನು ವಿಮರ್ಶೆ ಮಾಡಿ ವರದಿ ಮಾಡಬೇಕೆಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದೆ. ಅಜಮಾಯಿಷಿ ಮಾಡಿ ವರದಿ ಕಳುಹಿಸಬೇಕೆಂದಿದೆ.

ಶ್ರೀ ಟಿ. ಮಾದಯ್ಯಗೌಡರು.—ಹಾಗೆ ಮಾಡುತ್ತಿದ್ದಾರೆಯೆ ? ಸರ್ಕಾರಕ್ಕೆ ಕರ್ಟಾಲಡ್‌ಚೆಡ್ ರಿಪೋರ್ಟು ಬರುತ್ತಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬರುತ್ತಿದೆ. ಯಾವಾಗಲೂ ಮಾಡುವಂತೆ ಅಜಮಾಯಿಷಿ ಮಾಡಿ ವರದಿ ಕಳುಹಿಸಿದರೆ ಅದರ ಮೇಲೆ observation ಮಾಡಿ ವಾಪಸು ಕಳುಹಿಸುತ್ತೇವೆ. ಆದಷ್ಟು ಜಾಗ್ರತೆ ರಿಪೇರಿ ಕೆಲಸ ವಗೈರೆಗಳಿಗೆ ನಿಗ ಕೊಡಬೇಕೆಂದು ಹೇಳಿದೆ.

ಶ್ರೀ ಟಿ. ಮಾದಯ್ಯಗೌಡರು.—ಸಾರಾಬಾದು ಕಾಂಗಾರಿ ವಿಚಾರದಲ್ಲಿ ಗ್ರಾಮದ ಪಟೇಲರು ಮತ್ತು ರೆವೆನ್ಯೂ ಅಧಿಕಾರಿಗಳ ಮೇಲೆ ಜವಾಬ್ದಾರಿ ಹೊರಿಸಿ ಅವರು ಅದನ್ನು ನಿರ್ವಹಿಸದಿದ್ದರೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಅಥವಾ ತೆಗೆದುಕೊಳ್ಳಬೇಕೆಂದು ಇಷ್ಟಪಡುತ್ತಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಊಹಾ ಪ್ರಶ್ನೆ, ಆದಷ್ಟು ಜಾಗ್ರತೆ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದ ಯೋಚನೆಯಲ್ಲಿದೆ.

ಶ್ರೀ ಟಿ. ಮಾದಯ್ಯಗೌಡರು.—ಅನೇಕ ಕೆರೆಗಳು ಸಾರಾಬಾದು ಕಾಂಗಾರಿಗಳಾಗದೆ ಹೀನಸ್ಥಿತಿಗೆ ಬಂದಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿದೆ. ಅನೇಕ ಕೆರೆಗಳ ಕೆಲಸ ನಿಧಾನವಾಗಿದೆ.

ಶ್ರೀ ಟಿ. ಮಾದಯ್ಯಗೌಡರು.—De-silting ಕೆಲವು ಕಡೆ ಸರ್ಕಾರದವರೇ ಮಾಡಿದ್ದಾರೆಂದು ಗೊತ್ತಾಗಿದೆ. ಹಾಗೆ ಎಷ್ಟು ಕೆರೆಗಳಿಗೆ de-silting ಮಾಡುವುದಕ್ಕೆ ಕಾರ್ಯಕ್ರಮವಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೇ ಬೇರೆ ಪ್ರಶ್ನೆಯಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಮೇಜರ್ ಮತ್ತು ಮೈನರ್ ಕೆರೆಗಳಿಗೆ ಒಂದೇ ರೀತಿಯ ಸಾರಾಬಾದು ಕಾಂಗಾರಿಯಿದೆಯೆಂದು ಹೇಳಿದೆ, ಹಿಂದೆ ಎರಡು ತರಹ ಇತ್ತಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಎಷ್ಟು ದಿವಸದಿಂದ ಒಂದೇ ತರಹ ನಡೆಯುತ್ತಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟು ದಿವಸ ಎಂದಿಲ್ಲ. ಈಗ ಜಾರಿಯಲ್ಲಿರುವ ನಿಯಮದಂತೆ ಒಂದೇ ರೀತಿ ಇರುವುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಿಂದೆ ಸಣ್ಣ ಕೆರೆಗಳಿಗೆ ಸಾರಾಬಾದು ಕಾಂಗಾರಿ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿತ್ತಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ಎಕರೇಜ್ ಸೆಸ್ಸನ್ನು ಕೊಡಲು ಒಪ್ಪಿರುವ ಕಡೆ ಮಾತ್ರ ಸರ್ಕಾರಕ್ಕೆ ಜವಾಬ್ದಾರಿಯಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಮೇಜರ್ ಕೆರೆಗೆ ಹೇಗೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಏಕರೇಜ್ ಸೆಸ್ಸನ್ನು ಕೊಡಲು ಒಪ್ಪಿರುವಕಡೆ ಸರ್ಕಾರದವರು ಮಾಡುತ್ತಾರೆ. ರೈತರೇ ಮಾಡುತ್ತೇವೆಂದರೆ ಅವರಿಗೇ ಬಿಡುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ರೈತರೇ ಸಾರಾಬಾದು ಕಾಂಗಾರಿ ಮಾಡಲು ಒಪ್ಪಿದರೆ ಸರ್ಕಾರದವರು ಅವರಿಗೆ ಏನು ಪ್ರತಿಫಲ ಕೊಡುತ್ತಾರೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಅವರ ಆಸ್ತಿಯೇ ಆಗಿರುವುದರಿಂದ ಅವರೇ ಸರಿಯಾಗಿ ದುರಸ್ತುಮಾಡಿಕೊಳ್ಳಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಹಿಡಿಯುವುದಕ್ಕೆ ಪ್ರತಿಫಲವನ್ನು ಹೇಗೆ ಕೊಡಬೇಕೆಂದು ಟ್ಯಾಂಕ್ ಮೇಂಟೆನೆನ್ಸ್ ಕಾನೂನಿನಲ್ಲಿ ವಿಧಾಯಕ ಮಾಡಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಮೊದಲೇ ಹೇಳಿದೆ. ಸಾರಾಬಾದು ಕಾಂಗಾರಿಯನ್ನು ಸಂಬಂಧಪಟ್ಟ ರೈತರೇ ಮಾಡಿಕೊಳ್ಳಬೇಕಾದ್ದು ಅವರ ಕರ್ತವ್ಯ. ಹಾಗೆ ಮಾಡಿದರೆ ಅಲ್ಲಿನ ರೈತರಿಗೇ ನಾನು ಹಿಡಿಯುವ ಹಕ್ಕನ್ನೂ ಕೊಡಲಾಗುತ್ತದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು,—ಸಾರಾಬಾದು ಕಾಂಗಾರಿಯನ್ನು ಮಾಡಿಸುವ ಅಧಿಕಾರ ಪೆಟರ್ನೆರಿ ಇಲಾಖೆಗೆ ಏಕೆ ಕೊಡರಾಯಿತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾರಾಬಾದು ಕಾಂಗಾರಿಗಳು ನತೆಯದೇ ಇದ್ದುದರಿಂದ ಬರುವ ಉತ್ಪತ್ತಿಯನ್ನು ಹಾಳುಮಾಡಕೂಡದು, ಕೆಲವು ಕಡೆ ನಾನುಗಳು ಸಾಕುತ್ತಿರುವುದಕ್ಕೂ ತೊಂದರೆಯಾಗಬಾರದು ಎಂದು ಯೋಚನೆಮಾಡಿ ಆ ರೀತಿ ಏರ್ಪಾಡು ಮಾಡಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಹಿಡಿಯುವುದರಿಂದ ಬರುವ ಉತ್ಪತ್ತಿಯನ್ನು ಕೆರೆಗಳ ಜೀರ್ಣೋದ್ಧಾರಕ್ಕಾಗಿ ಏಕೆ ಉಪಯೋಗಿಸಕೂಡದು ? ಯಾವ ಕೆರೆಗಳಲ್ಲಿ ನಾನು ಹಿಡಿಯುವ ಹಕ್ಕನ್ನು ಹರಾಜುಮಾಡುತ್ತೀರೋ ಅಲ್ಲಿ ಬರುವ ಹಣವನ್ನು ಆ ಕೆರೆಯ ಕಾಂಗಾರಿಗೇ ಉಪಯೋಗಿಸಲು ಏರ್ಪಾಡುಮಾಡಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಕೆರೆಯ ವಿಚಾರವನ್ನು ತಾವು ಕೇಳುವುದು ?

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ನಾನು ಹಿಡಿಯುವ ಅಧಿಕಾರವನ್ನು ಪೆಟರ್ನೆರಿ ಇಲಾಖೆಯವರು

ಹರಾಜುಮಾಡುತ್ತಾರೆ. ಆದರೆ ರೈತರೇ ಸಾರಾಬಾದು ಕಾಂಗಾರಿ ಮಾಡಬೇಕು. ಆದರೆ ಏನು ಹಿಡಿಯುವ ಹಕ್ಕನ್ನು ಹರಾಜುಮಾಡಿದಮೇಲೆ ಆ ಉತ್ಪತ್ತಿಯನ್ನು ಕೆರೆ ಕಾಂಗಾರಿಗೇಕೆ ಉಪಯೋಗಿಸಬಾರದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲೇ ಹೇಳಿದಂತೆ ಅನೇಕ ಕೆರೆಗಳಲ್ಲಿ ಮೀನು ಹಿಡಿಯುವ ಹಕ್ಕನ್ನು ಹರಾಜುಮಾಡುತ್ತಿಲ್ಲ, ಆದ್ದರಿಂದ ನಿರ್ದಿಷ್ಟವಾಗಿ ಕೇಳಿದರೆ ಹೇಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಮೀನು ಹಿಡಿಯುವ ಹಕ್ಕನ್ನು ಹರಾಜುಮಾಡಿರುವ ಎಷ್ಟು ಕೆರೆಗಳ ಸಾರಾಬಾದು ಕಾಂಗಾರಿಗಳಾಗಿವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1949-50ರಲ್ಲಿ ಎಷ್ಟೋ ಮಾಡಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ದೇಶದಲ್ಲಿ ಒಟ್ಟು ಎಷ್ಟು ಟ್ಯಾಂಕ್ ಪಂಚಾಯಿತಿಗಳಿವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ನೋಟೀಸ್ ಬೇಕೆಂದು ಮೊದಲೇ ಹೇಳಿದೆ.

ಶ್ರೀ ಎಂ. ಎರ್. ನಂಜರಾಜ ಅರಸಿನವರು (ಮೈಸೂರು ಜಿಲ್ಲೆ).—ಎಷ್ಟು ಕೆರೆಗಳಲ್ಲಿ ಮೀನು ಹಿಡಿಯಲು ಏರ್ಪಾಡಾಗಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಏಕರೇಜ್ ಸೆಸ್ ಮತ್ತು ಇರಿಗೇಷ್ ಸೆಸ್ ಹೇಗೆ ಉಪಯೋಗವಾಗುತ್ತದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾರಾಬಾದು ಕಾಂಗಾರಿಗೆ ಏಕರೇಜ್ ಸೆಸ್ ಉಪಯೋಗಿಸಲಾಗುತ್ತದೆ. ಇರಿಗೇಷ್ ಸೆಸ್ಸನ್ನು ಕೆರೆಗಳ ಜೀರ್ಣೋದ್ಧಾರತೆಗೆ ಉಪಯೋಗಿಸಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಸ್ಪೆಷಲ್ ಎಗ್ಜಿಕ್ಯುಟಿವ್ ಇಂಜಿನಿಯರು ಮತ್ತು ಅಸಿಸ್ಟೆಂಟ್ ಇಂಜಿನಿಯರು ಪ್ರತಿಯೊಂದು ಕೆರೆಗಳನ್ನೂ ಅಜಮಾಯಿಷಿ ಮಾಡುತ್ತಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡಬೇಕೆಂದಿದೆ. ಅವರು ನೋಡಿ ವರದಿ ಮಾಡಬೇಕೆಂದಿದೆ.

ಶ್ರೀ ಬಿ. ಹುಚ್ಚೇಗೌಡರು.—ದೂರದಲ್ಲಿರುವುದನ್ನು ಯಾರೂ ಹೋಗಿ ಸರಿಯಾಗಿ ನೋಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾರೂ ನೋಡುತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕೆಲವನ್ನು ಕೆಲವು ಅಧಿಕಾರಿಗಳು ನೋಡದೇಯಿರಬಹುದು.

ಶ್ರೀ ಬಿ. ಹುಚ್ಚೇಗೌಡರು.—ವರ್ಷಕ್ಕೊಂದು ಸಲವಾದರೂ ನೋಡಲೇಬೇಕೆಂಬ ನಿಬಂಧನೆಯುಂಟೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದೆ. ರೆವೆನ್ಯೂ ಆಫೀಸರುಗಳು ಸಂಚಾರಮಾಡುವಾಗ ಹೋಗಿ ನೋಡಿ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದಿದೆ.

ಶ್ರೀ ಬಿ. ಹುಚ್ಚೇಗೌಡರು.—ಆ ಬಗ್ಗೆ ವರದಿಯೇ ನಾದರೂ ಬರುತ್ತದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬರುತ್ತದೆ. ಬಂದಾಗ ಅದನ್ನು ನೋಡಿ ತಕ್ಕ ತಿಳಿವಳಿಕೆಯನ್ನು ಕೊಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಕನಿಷ್ಠ ಪಕ್ಷ ಅಸಿಸ್ಟೆಂಟ್ ಇಂಜಿನಿಯರು, ಎಗ್ಜಿಕ್ಯೂಟಿವ್ ಇಂಜಿನಿಯರು ಅಥವಾ ಯಾರಾದರೂ ಒಬ್ಬ ಆಫೀಸರಾದರೂ ಪ್ರತಿಯೊಂದು ಕೆರೆಯನ್ನೂ ನೋಡಬೇಕು. ಹಾಗೆ ನೋಡಿರುವ ಬಗ್ಗೆ ವರದಿ ಬರುತ್ತಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಕೆರೆಗಳನ್ನು ನೋಡದೇಯಿರಬಹುದು. ಎಲ್ಲಾ ಅಜಮಾಯಿಷಿ ಮಾಡಿದ್ದಕ್ಕೂ ವರದಿ ಬರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಹಾಗೆ ಪ್ರತಿ ಕೆರೆಯನ್ನೂ ವರ್ಷಕ್ಕೆ ಒಂದು ಸಲವಾದರೂ ಯಾರೂ ನೋಡದಿದ್ದರೆ ಕೆರೆಗಳು ದುರಸ್ತಾಗಿರಲು ಸಾಧ್ಯವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು hypothetical ಪ್ರಶ್ನೆ ಆಯಿತು.

Sri Kadidal MANJAPPA (Shimoga District—General).—Has it come to the notice of the Government that there is a good deal of accumulation of silt and as a result of it certain percentage of the malnad areas have become useless.

The Hon'ble Sri T. MARIAPPA.—I accept that there is accumulation of silt. But I cannot say that on that ground certain areas have become useless.

Sri Kadidal MANJAPPA.—What action have the Government taken to prevent the accumulation of silt?

The Hon'ble Sri T. MARIAPPA.—We would be very happy if the villagers join together as sort of co-operative work and desilt the entire area. The Government are prepared to bear a little portion of their expenditure in that case.

ಶ್ರೀ ಎಕ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—ನೂರು ರೂಪಾಯಿಗಳಿಗಿಂತಲೂ ಹೆಚ್ಚಾಗಿ ಖರ್ಚಾಗದಿರತಕ್ಕ ಮತ್ತು ಅಚ್ಚುಕಟ್ಟಿನ ಒಂದು ವರ್ಷದ ನರಾ ಸರಿ ಕಂದಾಯದ ಮೊಬಲಗಿಗಿಂತಲೂ ಹೆಚ್ಚಾಗಿ ಖರ್ಚಾಗದಿರತಕ್ಕ ಕಾಮಗಾರಿಯನ್ನು ಮಾಡಿಸಿ ಆ ರೀತಿ ಎಷ್ಟು ಕೆರೆಗಳ ಕಾಮಗಾರಿಯ ವಿಷಯದಲ್ಲಿ ಅಮಲ್ದಾರರು ಕಾರ್ಯಕ್ರಮ ಕೈಗೊಂಡಿದ್ದಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಕ್. ಹುಚ್ಚಮಾಸ್ತಿಗೌಡರು.—ಆಯಾ ಕೆರೆಗಳ ಏಕರೇಜ್ ಸೆಸ್ಸನ್ನು ಬೇರೆ ಬೇರೆ ಹೆಡ್ಡಿಂಗ್‌ನಲ್ಲಿ ಇಡಲಾಗುತ್ತದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವೆಲ್ಲಾ ಐ. ಸಿ. ಎಫ್. ಫಂಡಿಗೆ ಹೋಗುತ್ತದೆ.

ಶ್ರೀ ಎಕ್. ಹುಚ್ಚಮಾಸ್ತಿಗೌಡರು.—ಆಯಾಯಾ ಕೆರೆಯ ಅಚ್ಚುಕಟ್ಟುದಾರರು ಆ ಸೆಸ್ಸನ್ನು ಕೊಟ್ಟಮೇಲೆ ಅದು ಆಯಾಯ ಕೆರೆಗಳಿಗೇ ಖರ್ಚಾಗಬೇಕಾದ್ದು ಸಹಜವಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತತ್ವಶಃ ಆ ರೀತಿ ಇರಬೇಕು. ಇನ್ನು ಮೇಲೆ ಬಡ್ಜೆಟ್‌ನಲ್ಲಿ ಕೊಟ್ಟಿರುವ ಹಾಗೆ ಯಾವ ಕೆರೆಗೆ ಎಷ್ಟು ರೂಪಾಯಿ ಖರ್ಚಾಗುತ್ತದೆಯೋ ಅಷ್ಟನ್ನು ಒದಗಿಸುವುದು ಅಗತ್ಯ.

ಶ್ರೀ ಎಕ್. ಹುಚ್ಚಮಾಸ್ತಿಗೌಡರು.—ಎಲ್ಲಾ ರೈತರೂ ಏಕರೇಜ್ ಸೆಸ್ ಕೊಡುತ್ತಾರೆ. ಆದ್ದರಿಂದ ಆ ಜವಾಬ್ದಾರಿ ಸರ್ಕಾರಕ್ಕೆ ಸೇರಿದ್ದಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಏಕರೇಜ್ ಸೆಸ್ ಕೊಟ್ಟಿದ್ದ ಪಕ್ಷದಲ್ಲಿ, ಸರ್ಕಾರದ ಜವಾಬ್ದಾರಿ ಹೆಚ್ಚಾಗಿದ್ದರೆ ಆ ಕೆಲಸವನ್ನು ಮಾಡಿಸುತ್ತೇವೆ.